ಬಾದಲ್ ನಂಜುಂಡಸ್ವಾಮಿ
ಕಲೆ: ಭಾವು ಪತ್ತಾರ





ವಂದಿಸುತ್ತಾ ಎಲ್ಲರೂ ಗಾಜಿನ ಡಬ್ಬವನ್ನು ಹೊತ್ತು ಊರ ಕಡೆ ನಡೆಯುತ್ತಾರೆ. ತಂದೆ ಮಗ ಇಬ್ಬರೂ ಊರು ತಲುಪುವವರೆಗೂ ಚಪ್ಪಾಳೆ ತಟ್ಟಬೇಕಿತ್ತು ಅಥವಾ ಕೂಗಬೇಕಿತ್ತು. ಆದರೆ ಸ್ವಲ್ಪ ದೂರ ನಡೆದಾಗ ಅವರು ನೆಮ್ಮದಿಯಾಗಿ ನಿದ್ರೆ ಮಾಡಲು ಅಣಿಯಾಗುತ್ತಿದ್ದಂತೆ ಬೆಳಕು ಕಮ್ಮಿ ಆಗುವುದು ಗೊತ್ತಾಗುತ್ತದೆ. ಆಗ ಊರ ಯಜಮಾನ ಅವರಿಬ್ಬರಿಗೂ ಬೈದುಕೊಂಡು... ಅವರನ್ನು ಇಳಿಸಿ ಅಲ್ಲೇ ಇದ್ದ ಇಬ್ಬರು ಹೆಂಗಸರನ್ನು ಕರೆದು 'ನೋಡ್ರಮ್ಮ, ಈ ಇಬ್ಬರೂ ಗಂಡಸರು ಉಪಯೋಗಕ್ಕೆ ಬಾರದವರು. ನೀವು ಗಾಜಿನ ಡಬ್ಬದೊಳಗೆ ಇಳಿದು ಶಬ್ದ ಮಾಡುತ್ತಾ ಕಾಲ ಕಳೆದರೆ ಊರು ತಲುಪಿದ ತಕ್ಷಣ ಈ ಗಾಜಿನ ಗಾತ್ರದಷ್ಟೇ ಚಿನ್ನವನ್ನು ನಿಮಗೆ ಕೊಡುತ್ತೇನೆ' ಎಂದು ಗಾಜಿನ ಡಬ್ಬಕ್ಕೆ ಇಳಿಸಿದನು. ವಾರಿಗೆಯಲ್ಲಿ ಅವರಿಬ್ಬರೂ ಅತ್ತೆ ಸೊಸೆಯರು. ಮೊದಲಿಗೆ ಇಬ್ಬರೂ ಜೋರಾಗಿ ಚಪ್ಪಾಳೆ ತಟ್ಟುತ್ತಾ, ನಂತರ ಅದೂ ಇದೂ ಮಾತನಾಡುತ್ತಾ, ಈಗ ಮಾತು ಜಗಳಕ್ಕೆ ತಿರುಗಿ ಒಬ್ಬರಿಗೊಬ್ಬರು ಜೋರಾಗಿ ಬೈದಾಡಲು ಶುರು ಮಾಡಿಕೊಂಡರು. ಅವರು ಬೈದಾಡಿಕೊಳ್ಳುತ್ತಿದ್ದರಿಂದ ಅತಿ ಹೆಚ್ಚಿನ ಶಬ್ದ ಉಂಟಾಗಿ ಬೆಳಕು ಹೆಚ್ಚು ಪ್ರಜ್ವಲಿಸುವಂತೆ ಮಾಡುತ್ತಿತ್ತು.

ಕೊನೆಗೆ ಹಂಗೂ ಹಿಂಗೂ ಊರು ತಲುಪಿದರು. ಆದರೆ ಊರು ತಲುಪುವುದು ಸ್ವಲ್ಪ ಲೇಟ್ ಆದ್ದರಿಂದ ಗಾಜಿನ ಡಬ್ಬದ ಗಾತ್ರ ಕಿರಿದಾಗಿಬಿಟ್ಟಿತ್ತು. ಇದರೊಟ್ಟಿಗೆ ಅತ್ತೆ ಸೊಸೆಯರೂ ಕಿರಿದಾಗಿಬಿಟ್ಟಿದ್ದರು. ಇದಾವುದರ ಪರಿವೆ ಇರದ ಅವರು ಜಗಳವಾಡುತ್ತಲೇ ಇದ್ದರು. ಇನ್ನೊಂದು ದೊಡ್ಡ ಸುದ್ದಿ ಏನೆಂದರೆ ಊರಿನವರು ಇಲ್ಲದ ವೇಳೆಯಲ್ಲಿ ಕೆಇಬಿಯವರು ಊರಿಗೆ ಬಂದು ಭಾಗ್ಯಜ್ಯೋತಿಯಡಿ ಇಡೀ ಊರಿಗೆ ಕರೆಂಟ್ ಕೊಟ್ಟು ಹೋಗಿದ್ದರು. ಕರೆಂಟಿನ ಬೆಳಕನ್ನು ಕಂಡ ಕೆಲವು ಗಂಡಸರಿಗೆ ಈಗ ಮನೋರಂಜನೆಯೂ ಬೇಕಿತ್ತು. ದಾರಿಯುದ್ದಕ್ಕೂ ಅತ್ತೆ ಸೊಸೆಯರ ಜಗಳದ ವೈಭವನ್ನು ಕಂಡಿದ್ದ ಅವರು ಅತ್ತೆ ಸೊಸೆಯನ್ನು ಗಾಜಿನ ಡಬ್ಬದಿಂದ ಹೊರಗೆ ಬಾರಲು ಬಿಡದೆ ಅವರು ಜಗಳ ಮಾಡುತ್ತಿದ್ದ ಪರಿಯನ್ನು ನೋಡಿ ನೋಡಿ ಖುಷಿ ಮಾಡಿಕೊಂಡರು. ಈಗ ಅತ್ತೆ ಸೊಸೆಯರ ಗಾಜಿನ ಡಬ್ಬವನ್ನು ಊರ ಮಧ್ಯದ ಅಂಗಳದಲ್ಲಿಟ್ಟು ಎಲ್ಲರೂ ಅವರನ್ನೇ ನೋಡುವಂತೆ ಮಾಡಿದರು. ಇದಾವುದರ ಪರಿವೆ ಇರದ ಪಾಪ ಮೂರ್ಖ ಅತ್ತೆ ಸೊಸೆಯರಿಂದಾಗಿ ಅವರಿದ್ದ ಪೆಟ್ಟಿಗೆ ಮೂರ್ಖರ ಪೆಟ್ಟಿಗೆ ಆಯಿತು. ಜೊತೆಗೆ ಅತ್ತೆ ಸೊಸೆ ಜಗಳಗಳು ಧಾರಾವಾಹಿಗಳಾದವು.

ಆದರೆ ಹೆಂಗಸರು ಮಾತ್ರ ಅತ್ತೆ ಸೊಸೆಗೆ ಒದಗಿಬಂದ ದುಸ್ಥಿತಿಯನ್ನು ಮೂರ್ಖರ ಪೆಟ್ಟಿಗೆಯಲ್ಲಿ ನೋಡಿ ನೋಡಿ ಈಗಲೂ ಒಳಗೊಳಗೇ ಅಳುತ್ತಾರೆ. ಗಂಡಸರಿಲ್ಲದ ವೇಳೆಯಲ್ಲಿ ಅವರಿಗೆ ಸಹಾಯ ಮಾಡಬೇಕೆಂದು ಬಯಸಿ ಇಪ್ಪತ್ತನಾಲ್ಕು ಘಂಟೆಯೂ ಧಾರಾವಾಹಿಗೆ ಅಂಟಿಕೊಂಡಿರುತ್ತಾರೆ. ಆದರೆ ಗಂಡಸರೂ ಅತ್ತೆ ಸೊಸೆ ಧಾರಾವಾಹಿಯನ್ನು ಹೆಂಗಸರಿಗಿಂತ ಹೆಚ್ಚು ತಾವೇ ನೋಡುತ್ತಾರೆ!